| ಒಎಸ್.ನಂ. 188 /2014 | ಪಿ.ಡಬ್ಲ್ಯೂ- 1 |
|---|---|

ದಿನಾಂಕಃ 22-08-2015 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ 1 ಹಾಗೂ 2ನೇ ಪ್ರತಿವಾದಿ ಪರ ವಕೀಲರು ಒಎಸ್ ವಕೀಲರಿಂದಃ

ಕರಾರುಪತ್ರವಾಗುವಾಗ ದಾವಾ ಆಸ್ತಿಯೂ 3ನೇ ಪ್ರತಿವಾದಿ ಬ್ಯಾಂಕಿಗೆ ಮಾರ್ಗೇಜ್ ಆಗಿದ್ದ ವಿಷಯ ನನಗೆ ಗೊತ್ತಿರಲಿಲ್ಲ. ಕರಾರುಪತ್ರ ಆಗಿ 7 ರಿಂದ 8 ತಿಂಗಳ ನಂತರ ಆ ವಿಷಯ ನನಗೆ ತಿಳಿಯಿತು. ಎಷ್ಟು ಸಾಲಕ್ಕೆ ದಾವಾ ಆಸ್ತಿಯನ್ನು ಅಡಮಾನ ಮಾಡಲಾಗಿದೆ ಅಂತ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು 3ನೇ ಪ್ರತಿವಾದಿ ಬ್ಯಾಂಕಿನವರು ಹರಾಜು ಮಾಡಿ ಸಾಲವನ್ನು ತುಂಬಿಸಿಕೊಂಡಿದ್ದಾರೆಂದರೆ ಸರಿ. ಸೆಂಥಿಲ್ ಎಂಬುವವರು ದಾವಾ ಆಸ್ತಿಯನ್ನು ಹರಾಜಿನಲ್ಲಿ ಖರೀದಿಸಿರುತ್ತಾರೆಂದರೆ ಸರಿ. ಸದರಿ ಆಸ್ತಿಯೂ 1 ಕೋಟಿ 33 ಲಕ್ಷಕ್ಕೆ ಹರಾಜಾಗಿದೆ ಅಂದರೆ ಇರಬಹುದು. 2000ನೇ ಇಸವಿಯಲ್ಲಿ ದಾವಾ ಆಸ್ತಿಯು 1 ಕೋಟಿ ಮೇಲೆ ಬೆಲೆಬಾಳುತ್ತಿತ್ತು ಅಂದರೆ ಸರಿಯಲ್ಲ. ನಾವು ಪ್ರತಿವಾದಿ 17 ಲಕ್ಷಕ್ಕೆ ಮಾರಾಟಮಾಡಲು ಒಪ್ಪಿದ್ದ ಅಂತ ಹೇಳಲು ಮಾರುಕಟ್ಟೆ ಮೌಲ್ಯದ ಶೇ 20 ರಷ್ಟು ಆಗುವುದಿಲ್ಲ ಅಂದರೆ ಸರಿಯಲ್ಲ. 2000ನೇ ಇಸವಿಯಲ್ಲಿ ದಾವಾ ಆಸ್ತಿಯ ಬೆಲೆ ಎಷ್ಟು ಇದ್ದಿತು ಅಂತ ತೋರಿಸಲು ದಾಖಲೆ ಇರುವುದಿಲ್ಲ. ದಾವಾ ಆಸ್ತಿಯು 5 ಸಾವಿರ ಚದರ ಅಡಿ ವಿಸ್ತೀರ್ಣ ಇರುತ್ತದೆ. ದಾವಾ ಆಸ್ತಿಯಲ್ಲಿ ಆರ್‌ಸಿಸಿ ಕಟ್ಟಡ ಇರುತ್ತದೆ ಅಂದರೆ ಸ್ವಲ್ಪ ಭಾಗದಲ್ಲಿ ಹಳೆಯ ಕಟ್ಟಡ ಇರುತ್ತದೆ. ದಾವಾ ಆಸ್ತಿ ಬರುವ ಪ್ರದೇಶವು ಶ್ರೀಮಂತರು ವಾಸಿಸುವ ಬಡಾವಣೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಹತ್ತಿರ ಹೋಟೆಲ್ ದಾಸ್‌ಪ್ರಕಾಶ್ ಇರುತ್ತದೆ ಅಂದರೆ ಸರಿ. ದಾವಾ ಆಸ್ತಿಯ ಸುತ್ತ ಮುತ್ತ ಸಾಕಷ್ಟು ಅಪಾರ್ಟ್‌ಮೆಂಟ್‌ಗಳು, ಆಸ್ಪತ್ರೆಗಳು, ಶಾಲೆಗಳು ಬಂದಿರುತ್ತವೆ ಅಂದರೆ ಸರಿ. ವಿಕ್ರಮ್ ಆಸ್ಪತ್ರೆ ಕೂಡಾ ದಾವಾ ಆಸ್ತಿಯ ಸಮೀಪವೇ ಇರುತ್ತವೆ ಅಂದರೆ ಸರಿ. 2000ನೇ ಇಸವಿಯಲ್ಲಿ

ನಾನು ಆದಾಯ ತೆರಿಗೆ ಕಟ್ಟುತ್ತಿದ್ದೆ. ಈಗಲೂ ಕೂಡಾ ನಾನು ಆದಾಯತೆರಿಗೆ ಕಟ್ಟುತ್ತೇನೆ. ನಾನು ನನ್ನ ಆದಾಯ ತೆರಿಗೆ ರಿಟರ್ನ್‌ನಲ್ಲಿ ಪ್ರತಿವಾದಿಗಳಿಗೆ 17 ಲಕ್ಷ ಕೊಟ್ಟಿರುವುದನ್ನು ತೋರಿಸಿರುತ್ತೇನೆ. ಆ ರೀತಿ ಆದಾಯ ತೆರಿಗೆ ಇಲಾಖೆಗೆ ನಾನು 17 ಲಕ್ಷ ಕೊಟ್ಟಿರುವುದನ್ನು ತೋರಿಸಿರುವುದಿಲ್ಲ ಅಂದರೆ ಸರಿಯಲ್ಲ. ಈಗ ಇನ್‌ಕಮ್‌ಟ್ಯಾಕ್ಸ್ ದಾಖಲೆಗಳು ನನ್ನ ಬಳಿ ಇರುವುದಿಲ್ಲ.

1ನೇ ಪ್ರತಿವಾದಿಯ ಸಹೋದರ ಜಗನ್ನಾಥರಾವ್ ನನಗೆ ಗೊತ್ತಿರುತ್ತದೆ. ಅವರು ಚಾರ್ಟೆಡ್ ಅಕೌಂಟೆಟ್ ಇದ್ದು ವ್ಯಾಪಾರಸ್ಥರು ಆಗಿದ್ದಾರೆಂದರೆ ಸರಿ. ಪ್ರತಿವಾದಿ 1 ಹಾಗೂ 2 ಇವರು ಆರ್ಥಿಕ ಸಂಕಷ್ಟದಲ್ಲಿದ್ದು ನನ್ನಿಂದ ಸಾಲದ ರೂಪದಲ್ಲಿ ಹಣ ಪಡೆದಿರುತ್ತಾರೆ ಅವರು ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ ಕರಾರುಪತ್ರ ಮಾಡಿಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಕರಾರುಪತ್ರದ ದಿನ ಕೇವಲ 10 ಲಕ್ಷರೂಗಳನ್ನು ಮಾತ್ರ ಜಗನ್ನಾಥರಾವ್ ರವರ ಮಧ್ಯಸ್ಥಿಕೆಯಲ್ಲಿ ಕೊಟ್ಟಿ 17 ಲಕ್ಷ ಕೊಡಲಾಗಿದೆ ಅಂತ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಂದ ಖಾಲಿ ಸ್ಟ್ಯಾಂಪ್ ಪೇಪರ್‌ಗಳ ಮೇಲೆ ಹಾಗೂ ಖಾಲಿ ಚೆಕ್‌ಗಳ ಮೇಲೆ ಸಹಿ ಪಡೆದುಕೊಂಡಿರುತ್ತೇನೆ, ಯಾವುದೇ ಪ್ರತಿವಾದಿಗಳು ಕ್ರಯದಕರಾರುಪತ್ರವನ್ನು ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ. ನಾನು ಖಾಲಿ ಚೆಕ್‌ಗಳನ್ನು ಪಡೆದುಕೊಂಡು 90 ಲಕ್ಷರೂಗೆ ಚೆಕ್‌ನ್ನು ಬರೆದುಕೊಂಡು ಪ್ತತಿವಾದಿಗಳ ವಿರುದ್ಧ ಸುಳ್ಳು ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಪ್ರತಿವಾದಿ 1 ಹಾಗೂ 2 ಇವರು 17 ಲಕ್ಷ ರೂಗಳನ್ನು ಹೊತುಪಡಿಸಿ ಬೇರೆ ಹಣ ಪಡೆದಿರುವುದಿಲ್ಲ, ಪ್ರತಿವಾದಿಗಳು ನನ್ನಿಂದ ಕೇವಲ 10 ಲಕ್ಷ ರೂಗಳನ್ನು ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗಳು 10 ಲಕ್ಷರೂವನ್ನು ಬಡ್ಡಿಯೊಂದಿಗೆ ಕೊಡಲು ಒಪ್ಪಿದ್ದರು ಅಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆಂದರೆ ಸರಿ. 2000ನೇ ಇಸವಿಯಲ್ಲಿ ಕೂಡಾ ನಾನು ಬಡ್ಡಿ ವ್ಯವಹಾರ ಮಾಡುತ್ತಿದ್ದೆ. ನಾನು ಈಗ ಮನಿ ಲೆನ್‌ಡಿಂಗ್ ಲೈಸೆನ್ಸ್‌ನ್ನು ಸರೆಂಡರ್ ಮಾಡಿರುತ್ತೇನೆ ಆ ಬಗ್ಗೆ ನನ್ನ ಬಳಿ ದಾಖಲೆಯಿರುವುದಿಲ್ಲ, ನಾನು ಅಕ್ರಮವಾಗಿ ಹಣ ಗಳಿಸುವ ಉದ್ದೇಶದಿಂದ ಖಾಲಿ ಚೆಕ್‌ಗಳಿಗೆ 90 ಲಕ್ಷ ಅಂತ ಬರೆದುಕೊಂಡು ಪ್ರಕರಣ ದಾಖಲಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ, ಸಾಕ್ಷಿ ಸ್ವತಃ ಹೇಳಿರುತ್ತಾರೆ ಅಂದು ಬೇರೆಯದೇ ಆದ

ವ್ಯವಹಾರ ಇರುತ್ತದೆ. 90 ಲಕ್ಷ ಕೊಟ್ಟ ಬಗ್ಗೆ ದಾಖಲೆ ಇದೆಯಾ ಅಂದರೆ ಸಾಕ್ಷಿಯೂ ನಾನು ಅವರಿಗೆ 90 ಲಕ್ಷ ನಗದಾಗಿ ಕೊಟ್ಟಿರುವುದಿಲ್ಲ. ಪ್ರತಿವಾದಿಗಳು ನನ್ನ ಮೇಲೆ ಇಟ್ಟಿದ್ದ ವಿಶ್ವಾಸವನ್ನು ದುರುಪಯೋಗ ಪಡಿಸಿಕೊಂಡು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವೆ ಮಾಡಿರುತ್ತೇನೆ ಅಂದರೆ ಸರಿಯಲ್ಲ, ಪ್ರತಿವಾದಿಗಳು ಕರಾರುಪತ್ರ ಅಂತ ಹೇಳಿ ಸಹಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಅತಿ ಹೆಚ್ಚಿನ ಬಡ್ಡಿಯನ್ನು ಕೇಳುತ್ತಿದ್ದೇನೆ ಅಂದರೆ ಸರಿಯಲ್ಲ,

ಮರುವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಸಿವಿಲ್
ನ್ಯಾಯಾಧೀಶರು(ಹಿ.ವಿ.), ಮೈಸೂರು